**ಕರ್ನಾಟಕ ಸರ್ಕಾರ**

**ಸಂಖ್ಯೆ:** ಡಿಟಿಇ 462 ಎಸಿಎಂ(2) 2012-13

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:06-08-2013.

**-:: ಸು ತ್ತೋಲೆ ::-**

**ವಿಷಯ:** 2013-14ನೇ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಹತೆಗೆ ಅನುಗುಣವಾದ ಕೋರ್ಸುಗಳ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ ಅವಧಿ ವಿಸ್ತರಿಸುವ ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂ. ಇಡಿ 40 ಟಿಪಿಇ 2013, ದಿ:19-03-2013.
2. ಈ ಕಛೇರಿ ಪ್ರವೇಶಾಧಿಸೂಚನೆ ಪತ್ರ ಸಂ. ಡಿಟಿಇ/462/ಎಸಿಎಂ(2)/2012-13, ದಿನಾಂಕ:17-05-2013.
3. ಸಕಾರದ ಪತ್ರ ಸಂ. ಇಡಿ 171 ಟಪಿಇ 2013, ದಿನಾಂಕ:06-08-2013.

-000000-

ಉಲ್ಲೇಖ(1)ರ ಸರ್ಕಾರದ ಆದೇಶದನ್ವಯ 2013-14ನೇ ಸಾಲಿನಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯವತಿಯಿಂದ ಆನ್-ಲೈನ್ ಮುಖಾಂತರ ಎಸ್.ಎಸ್.ಎಲ್.ಸಿ ಪಾಸಾದ ಅಭ್ಯರ್ಥಿಗಳಿಗೆ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ ಉಲ್ಲೇಖ(2)ರ ಈ ಕಛೇರಿ ಪ್ರವೇಶಾಧಿಸೂಚನೆಯನ್ವಯ Onine Interactive Counseling ಮುಖಾಂತರ ರಾಜ್ಯದ 11 ನೋಡಲ್ ಸೆಂಟರ್‌ಗಳಲ್ಲಿ ಪ್ರವೇಶ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿರುತ್ತದೆ.

ಉಲ್ಲೇಖ(3)ರ ಸರ್ಕಾರದ ಪತ್ರದಲ್ಲಿ ಸಂಸ್ಥೆಯ ಕೋರ್ಸುಗಳಲ್ಲಿ ಖಾಲಿ ಉಳಿದಿರುವ ಸೀಟುಗಳನ್ನು ಆಯಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು ತಮ್ಮ ಹಂತದಲ್ಲಿಯೇ ಎಸ್.ಎಸ್.ಎಲ್.ಸಿ ಯಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಗೆ **ಆಫ್-ಲೈನ್** ಮುಖಾಂತರ ಅರ್ಜಿಗಳನ್ನು ವಿತರಿಸಿ ಹಾಗೂ ಮೆರಿಟ್ ಪಟ್ಟಿ ತಯಾರಿಸಿ ಅಭ್ಯರ್ಥಿಗಳ ಮೆರಿಟ್ ಆಧಾರದ ಮೇಲೆ ಸೀಟುಗಳನ್ನು ರೋಸ್ಟರ್ ಅನುಗುಣವಾಗಿ ನಿಯಮಗಳನ್ನು ಪಾಲಿಸಿ ತುಂಬಲು ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಾರ್ವಜನಿಕರ ಹಿತದೃಷ್ಟಿಯ ಮೇರೆಗೆ ಈ ಕೆಳಕಂಡಂತೆ ಅವಧಿಯನ್ನು ವಿಸ್ತರಿಸಿ ಅನುಮತಿ ನೀಡಲಾಗಿದೆ.

1. **ಅರ್ಜಿ ಪಡೆಯಲು ಹಾಗೂ ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ವಿಸ್ತರಿಸಲಾದ ದಿ:07-08-2013 ರಿಂದ ದಿನಾಂಕ:13-08-2013ರ ಮದ್ಯಾಹ್ನ 2:00 ಗಂಟೆಯವರೆಗೆ.**

2. **ದಿನಾಂಕ:13-08-2013ರ ಸಂಜೆ 5.00 ಗಂಟೆಗೆ ಕಾಲೇಜಿನ ಸೂಚನಾ ಫಲಕದಲ್ಲಿ MS-EXCEL Format ನಲ್ಲಿ ತಯಾರಿಸಿ ಅರ್ಹ ಅಭ್ಯರ್ಥಿಗಳ ಮೆರಿಟ್ ಪಟ್ಟಿಯನ್ನು ಪ್ರಕಟಿಸುವುದು.**

3. **ಪ್ರವೇಶ ಪ್ರಕ್ರಿಯೆಯನ್ನು ನಡೆಸುವ ದಿನಾಂಕ:14-08-2013 ರ ಬೆಳಿಗ್ಗೆ 08.00 ಗಂಟೆಯಿಂದ.**

4. **ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ ಕಾಲೇಜಿನಲ್ಲಿಯೇ ಪ್ರವೇಶ ಪಡೆಯಲು ದಿನಾಂಕ:14-08-2013ರ ಬೆಳಿಗ್ಗೆ 09.00 ಗಂಟೆಗೆ ಸಂದರ್ಶನಕ್ಕೆ ಎಲ್ಲಾ ಈ ಕೆಳಕಂಡ ಮೂಲ ದಾಖಲೆಗಳು/ಪ್ರವೇಶ ಶುಲ್ಕದೊಂದಿಗೆ ಹಾಜರಾಗಿ ಸೀಟು ಆಯ್ಕೆ ಮಾಡಿಕೊಂಡು ಪ್ರವೇಶ ಪಡೆಯುವುದು.**

## <u>ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಅರ್ಜಿ ಪಡೆಯುವ ಹಾಗೂ ಸಲ್ಲಿಸುವ ವಿಧಾನ:</u>

ಅಭ್ಯರ್ಥಿಗಳು ನಿಗದಿತ ಅರ್ಜಿಯನ್ನು ಸರ್ಕಾರವು ನಿಗಧಿಪಡಿಸಿದ ಅರ್ಜಿ ಶುಲ್ಕವನ್ನು (G.M /II A /II B/III A/III B = ರೂ. 100/- & SC/ST/CAT-1 = ರೂ. 50/-) ಅರ್ಜಿಗಳು ತಾಂತ್ರಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್ www.dte.kar.nic.in, www.dtekarnataka.in & www.diplomaadmission.in ನಲ್ಲಿ ಇರುತ್ತದೆ. **ಈ ಅರ್ಜಿಯನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ (DownLoad) ಮಾಡಿಕೊಂಡು, ಸದರಿ ಭರ್ತಿ ಮಾಡಿದ ಅರ್ಜಿಯನ್ನು ಮುದ್ದಾಂ ಅದೇ ಸಂಸ್ಥೆಯಲ್ಲಿಯೇ ಇಚ್ಛೆಯುಳ್ಳ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಸಲ್ಲಿಸುವುದು.**

ಸಂಪೂರ್ಣವಾಗಿ ಭರ್ತಿ ಮಾಡಿದ ಅರ್ಜಿ ಸಲ್ಲಿಸುವಾಗ ಅರ್ಜಿಯ ಜೊತೆಗೆ ಅರ್ಜಿ ಶುಲ್ಕ ಕರ್ನಾಟಕ ರಾಜ್ಯದ ಯಾವುದೇ “STATE BANK OF MYSORE” ಶಾಖೆಗಳಿಂದ **‘ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು”** ಇವರ ಹೆಸರಿಗೆ **ಡಿ.ಡಿ (Demand Draft)** ಪಡೆದು **ಸಂಬಂಧಿಸಿದ ಇಚ್ಛೆಯುಳ್ಳ** ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಸಲ್ಲಿಸುವುದು.

ಅರ್ಜಿಗಳನ್ನು ದಿನಾಂಕ:**<u>07–08–2013</u>** ರಿಂದ ಮೇಲ್ಕಂಡ **ವೆಬ್‌ಸೈಟ್‌ನಿಂದ ಡೌನ್‌ಲೋಡ್ (DownLoad) ಮಾಡಿಕೊಳ್ಳಬಹುದಾಗಿದೆ.** ಅರ್ಹ ಅಭ್ಯರ್ಥಿಗಳು ಪೂರ್ಣ ಪ್ರಮಾಣದಲ್ಲಿ ಭರ್ತಿ ಮಾಡಲಾದ ಅರ್ಜಿಯನ್ನು ಪ್ರವೇಶ ಬಯಸುವ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ದಿನಾಂಕ: **<u>13–08–2013 ರ ಮದ್ಯಾಹ್ನ 2.00 ಗಂಟೆಯ</u>** ಒಳಗಾಗಿ ಸಲ್ಲಿಸತಕ್ಕದ್ದು.

ಅ) ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಒಟ್ಟಾರೆಯಾಗಿ ಶೇ. 35 ಅಂಕಗಳನ್ನು ಪಡೆದ ಅಭ್ಯರ್ಥಿಯ ಮೂಲ ಅಂಕಪಟ್ಟಿ.

ಆ) ಮೂಲ ವರ್ಗಾವಣೆ ಪ್ರಮಾಣ ಪತ್ರ.

ಇ) ಕರ್ನಾಟಕದಲ್ಲಿ 01ನೇ ತರಗತಿಯಿಂದ 10ನೇ ವರ್ಷಗಳ ವರೆಗೆ ಕನಿಷ್ಠ 05 ವರ್ಷ ವ್ಯಾಸಂಗ ಮಾಡಿದ ಬಗ್ಗೆ ವ್ಯಾಸಂಗ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಅಥವಾ ಉಪ ನಿರ್ದೇಶಕರು ಇವರಿಂದ ಧೃಡೀಕರಿಸಿರಬೇಕು.

ಈ) 01ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ ಬಗ್ಗೆ ವ್ಯಾಸಂಗ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಅಥವಾ ಉಪ ನಿರ್ದೇಶಕರು ಇವರಿಂದ ಧೃಡೀಕರಿಸಿರಬೇಕು. ಹಾಗೂ ಕನ್ನಡ ಮಾಧ್ಯಮ / ಗ್ರಾಮೀಣ ಕೋಟಾದಡಿ ಪ್ರವೇಶ ಬಯಸುವ ಅಭ್ಯರ್ಥಿಗಳು ಸಂಬಂಧಿಸಿದ ಪ್ರಮಾಣ ಪತ್ರವನ್ನು ಸಲ್ಲಿಸುವುದು. (ಗ್ರಾಮೀಣ ಕೋಟಾದಡಿ ಪ್ರವೇಶ ಬಯಸುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು **“ಪರಿಶೀಲನಾ ಪ್ರಮಾಣ ಪತ್ರ”** ಸಲ್ಲಿಸತಕ್ಕದ್ದು).

ಉ) ಮೀಸಲಾತಿಯಡಿ ಕ್ಲೇಮು ಮಾಡುವ ಅಭ್ಯರ್ಥಿಗಳು ಮೂಲ ಜಾತಿ ಪ್ರಮಾಣ ಪತ್ರವನ್ನು ಮತ್ತು ಆದಾಯ ಪ್ರಮಾಣ ಪತ್ರವನ್ನು ನೋಡಲ್ ಸೆಂಟರ್‌ಗಳಲ್ಲಿ ಪ್ರವೇಶ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕು. ಮೀಸಲಾತಿ/ಆದಾಯ ಪ್ರಮಾಣ ಪತ್ರ ಸಲ್ಲಿಸದೇ ಇರುವ ಅಭ್ಯರ್ಥಿಗಳು ನಿಯಮಗಳ ಪ್ರಕಾರ ಪ್ರವೇಶಕ್ಕೆ ಇರಬೇಕಾದ ಇತರೇ ಅರ್ಹತೆಗಳನ್ನು ಪೂರೈಸಿದ್ದಲ್ಲಿ ಸಾಮಾನ್ಯ ಗುಂಪಿನಡಿ ಪರಿಗಣಿಸಲಾಗುವುದು

ಊ) ವೈದ್ಯಕೀಯ ಪ್ರಮಾಣ ಪತ್ರವನ್ನು ನೊಂದಾಯಿಸಿದ ಅಧೀಕೃತ ವೈದ್ಯರಿಂದ ಪಡೆದು ಸಲ್ಲಿಸಬೇಕು.

ಋ) ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 04 ಭಾವಚಿತ್ರಗಳು.

ಸರ್ಕಾರದ ಆದೇಶ ಸಂಖ್ಯೆ. ಇಡಿ 119 ಟಿಪಿಇ 2005, ದಿನಾಂಕ:18–10–2005 ಮತ್ತು ಸರ್ಕಾರದ ಆದೇಶ ಸಂಖ್ಯೆ. ಇಡಿ 10 ಟಿಪಿಇ 2012, ದಿನಾಂಕ:29–05–2012 ರನ್ವಯ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಕೆಳಗೆ ನಿಗಧಿಪಡಿಸಿರುವ ಶುಲ್ಕವನ್ನು ಪ್ರವೇಶ ಸಮಯದಲ್ಲಿ ನಗದು ರೂಪದಲ್ಲಿ ಕಡ್ಡಾಯವಾಗಿ ಪಾವತಿಸಬೇಕು. ತಪ್ಪಿದಲ್ಲಿ ಪ್ರವೇಶಕ್ಕೆ ಪರಿಗಣಿಸಲಾಗುವುದಿಲ್ಲ.

| ಕ್ರ. ಸಂ. | ಪಾಲಿಟೆಕ್ನಿಕ್ | ಬೋಧನಾ ಶುಲ್ಕ | ಅಭಿವೃದ್ಧಿ ಶುಲ್ಕ | ಇತರೆ ಶುಲ್ಕ | ಒಟ್ಟು |
|---|---|---|---|---|---|
| 1. | ಸರ್ಕಾರಿ ಪಾಲಿಟೆಕ್ನಿಕ್ | ₹ 2,300/- | ₹ 500/- | ₹ 800/- | ₹ 3,600/- |
| 2. | ಅನುದಾನಿತ ಪಾಲಿಟೆಕ್ನಿಕ್ | ₹ 4,400/- | ₹ 500/- | ₹ 800/- | ₹ 5,700/- |
| 3. | ಖಾಸಗಿ ಪಾಲಿಟೆಕ್ನಿಕ್ | ₹ 9,450/- | ₹ 500/- | ₹ 800/- | ₹ 10,750/- |

ಮೇಲೆ ನಮೂದಿಸಿರುವಂತೆ ಇಂದೇ / ಕೂಡಲೇ ಕ್ರಮ ತೆಗೆದುಕೊಂಡು ಈ ಬಗ್ಗೆ ಸ್ಥಳೀಯವಾಗಿ ಪತ್ರಿಕಾ ಪ್ರಕಟಣೆಯನ್ನು ನೀಡಿ, ನಿಯಮಗಳ ಪ್ರಕಾರ **ದಿ:14–08–2013ರ** ರೊಳಗೆ ಪ್ರವೇಶ ಪ್ರಕ್ರಿಯೆಯನ್ನು ಸರ್ಕಾರಿ/ಅನುದಾನಿತ/ಖಾಸಗಿ ಪ್ರಿನ್ಸಿಪಾಲರುಗಳು ತಮ್ಮ ಹಂತದಲ್ಲಿಯೇ ಅರ್ಹ ಅಭ್ಯರ್ಥಿಗಳ **ಆಫ್–ಲೈನ್** ಮುಖಾಂತರ ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸತಕ್ಕದ್ದು. ಪ್ರವೇಶಾವಧಿಯನ್ನು ವಿಸ್ತರಿಸಲಾದ ಅವಧಿಯಲ್ಲಿ ಪ್ರವೇಶ ಪಡೆದ ಅಭ್ಯರ್ಥಿಗಳ ಸಂಬಂಧದಲ್ಲಿ ನಿಯಮಾನುಸಾರ ಕನಿಷ್ಠ ಹಾಜರಾತಿಯನ್ನು ಪೂರೈಸುವ ಷರತ್ತಿಗೊಳಪಟ್ಟಿರುತ್ತದೆ. ಸದರಿ ಅಭ್ಯರ್ಥಿಗಳಿಗೆ ಪ್ರಥಮ ಡಿಪ್ಲೋಮಾ ತರಗತಿಗಳನ್ನು ಪ್ರಾರಂಭಿಸಲು ಸೂಕ್ತ ವ್ಯವಸ್ಥೆ ಮಾಡುವುದಲ್ಲದೆ, ಮೇಲ್ಕಂಡ ವಿಸ್ತರಿಸಲಾದ ಅವಧಿಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುವುದರ ಮೂಲಕ ಪಠ್ಯಕ್ರಮದನ್ವಯ ನಿಗಧಿತ ಪಾಠ ಪ್ರವಚನಗಳನ್ನು ಮುಗಿಸುವಲ್ಲಿ ಕ್ರಮತೆಗೆದುಕೊಂಡು ನಿರ್ದೇಶನಾಲಯಕ್ಕೆ ವರದಿ ಮಾಡುವುದು.

**ಪ್ರಥಮ ಡಿಪ್ಲೋಮಾ ಪ್ರವೇಶಾವಧಿಯನ್ನು ಪುನಃ ವಿಸ್ತರಿಸಲಾಗುವುದಿಲ್ಲ. ಪ್ರಯುಕ್ತ, ಇದನ್ನು ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಗಮನದಲ್ಲಿರಿಸಿಕೊಂಡು ನಿಯಮಗಳ ಪ್ರಕಾರ ಪ್ರವೇಶವನ್ನು ಪೂರೈಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.**

ಹೆಚ್ಚಿನ ಮಾಹಿತಿಗಾಗಿ **080–2235 6949** ದೂರವಾಣಿಯನ್ನು ಸಂಪರ್ಕಿಸುವುದು.

ಸಹಿ/–

**ನಿರ್ದೇಶಕರು**

ರಾಜ್ಯದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ ಸೂಕ್ತ ಮಾಹಿತಿಗಾಗಿ ಹಾಗೂ ಅನುಸರಣೆಗಾಗಿ – ಸದರಿ ಸುತ್ತೋಲೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಿ ಹಾಗೂ ಸ್ಥಳೀಯ ದಿನಪತ್ರಿಕೆಯಲ್ಲಿ ಜಾಹಿರಾತು ನೀಡಿ ನಿಯಮಗಳ ಪ್ರಕಾರ ರೋಸ್ಟರ್ ಮತ್ತು ಮೆರಿಟ್‌ಗನುಗುಣವಾಗಿ ತಮ್ಮ ಹಂತದಲ್ಲಿಯೇ **ದಿ:14–08–2013ರ** ಒಳಗೆ ಪ್ರವೇಶ ಪ್ರಕ್ರಿಯೆಯನ್ನೂ ಪೂರ್ಣಗೊಳಿಸತಕ್ಕದ್ದು.

<u>**ಪ್ರತಿ ಮಾಹಿತಿಗಾಗಿ:–**</u>

1) ಕಾರ್ಯದರ್ಶಿ, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು.
2) ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ.
3) ನಿರ್ದೇಶಕರ ಆಪ್ತ ಶಾಖೆಗೆ.
4) ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ.
5) ಸಂಯೋಜನಾಧಿಕಾರಿಗಳು, ಇ–ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು – ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
6) ಎಸ್.ಟಿ.ಎಲ್, ಡಿವಿಪಿ(1) ಮತ್ತು ಡಿವಿಪಿ(2) ವಿಭಾಗಕ್ಕೆ.
7) ಇಆರ್‌ಎಸ್ ವಿಭಾಗಕ್ಕೆ – ಮೇಲ್ಕಂಡ ಅವಧಿಯಲ್ಲಿ ಕರ್ನಾಟಕೇತರ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರ ನೀಡುವ ಬಗ್ಗೆ ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.
೮) ಕಛೇರಿ ಪ್ರತಿ.

Application No.

GOVERNMENT OF KARNATAKA

DIRECTORATE OF TECHNICAL EDUCATION

APPLICATION FORM FOR OFFLINE ADMISSION TO DIPLOMA COURSES FOR THE YEAR 2013 – 14

Before filling the application form, Please read the item – wise instructions as given in the brochure

SSLC or EQUIVALENT REGISTER No.

1. Name of the candidate

2. Date of Birth

3. Name of the Father

4. Name of the Mother

5. Sex

Male Female

6. Address

Name ……………………………………………………………………

Address ……………………………………………………………………

City ……………………………………………………………………

State ……………………………………………………………………

Pin Code

7. Telephone Number

a) Landline

b) Mobile

c) E-mail

8. Indian Nationality

YES NO

9. Mother Tongue

10. Qualifying Examination

SSLC CBSE ICSE OTHER

11. Native State Code

12. Native District Code

13. Code of the State Appeared for SSLC / Equivalent

14. Code of the District Appeared for SSLC / Equivalent

15. Year of Passing

16. Total Max Marks in all Sub

17. Total Marks Obtained in all Sub

18. Percentage

19. Marks in Maths

20.Marks in Science

21.Total Max Marks in Science & Maths

22.Marks Obtained Science & Maths

23. No.of Years Studied In Karnataka

24. Have you Rural Study (1st to 10th) YES NO

25.Have you Kannada Medium (1st to 10th) YES NO

26. Claiming Exemption From 5 Years Study Rule Yes NO

27. If YES Mention Clause Code

28.Income

29. Category

30. Name of the Caste

## DECLARATION

We declare that the above information is true and correct to the best of our knowledge

Signature of Parent/Guardian

Signature of the Candidate

**RECENT PASPORT SIZE COLOR PHOTO**